

## ಅಕ್ಷಯ್ ಗಬ್ಬರ್!

ತಮ್ಮ ಚಿತ್ರಗಳ ಗೆಲುವನ್ನು ದಕ್ಷಿಣ ಭಾರತೀಯ ಸಿನಿಮಾಗಳ ರೀಮೇಕ್‌ನಲ್ಲಿ ಕಂಡುಕೊಳ್ಳುತ್ತಿರುವ ನಟ ಅಕ್ಷಯ್ ಕುಮಾರ್ ಈಗ ಮತ್ತೊಂದು ರೀಮೇಕ್ ಚಿತ್ರಕ್ಕೆ ಅಡಿಯಿಟ್ಟಿದ್ದಾರೆ. ಜೊತೆಗೆ ದಕ್ಷಿಣದ ಮತ್ತೊಬ್ಬ ಪ್ರತಿಭಾವಂತ ನಿರ್ದೇಶಕ ಬಾಲಿವುಡ್‌ಗೆ ಪದಾರ್ಪಣೆ ಮಾಡುತ್ತಿದ್ದಾರೆ.

ಯಶಸ್ವಿ ಚಿತ್ರ 'ರೌಡಿ ರಾಥೋರ್'ನ ತಂಡ ಮತ್ತೆ ಸೇರಿ ತಯಾರಿಸುತ್ತಿರುವ ಈ ಚಿತ್ರದ ಹೆಸರು 'ಗಬ್ಬರ್'. ತೆಲುಗಿನ ಸೂಪರ್ ಹಿಟ್ ಚಿತ್ರ 'ರಾಮನ್ನ'ದ ಹಿಂದಿ ಅವತರಣಿಕೆ ಇದು. ಬಂಡವಾಳ ಹೂಡುತ್ತಿರುವವರು ಸಂಜಯ್ ಲೀಲಾ ಬನ್ಸಾಲಿ. ತೆಲುಗಿನಲ್ಲಿ ಗಮ್ಯಂ, ವೇದಂ ನಂತಹ ಯಶಸ್ವಿ ಚಿತ್ರಗಳನ್ನು ನೀಡಿರುವ ನಿರ್ದೇಶಕ ಕ್ರಿಶ್ 'ಗಬ್ಬರ್' ಮೂಲಕ ಬಾಲಿವುಡ್ ಪ್ರವೇಶಿಸುತ್ತಿದ್ದಾರೆ.

## ಅಮೀರ್ ಅಡ್ರೆಸ್

ಪುಟ್ಟ ಹುಡುಗ ಆಡಿ ಬೆಳೆದು, ಸಿನಿಮಾ ಲೋಕ ಪ್ರವೇಶಿಸಿ, ನಟ–ನಿರ್ದೇಶಕನಾಗಿ ಜಗತ್ತಿನ ಗಮನ ಸೆಳೆದರೂ ಆ ಮನೆ ಬದಲಾಗಿರಲಿಲ್ಲ. ಹಣ ಮತ್ತು ಜನಪ್ರಿಯತೆ ಹತ್ತಿರದೊಡನೆ ನಗರಗಳಲ್ಲಿ ದೊಡ್ಡ ದೊಡ್ಡ ಬಂಗಲೆ ಖರೀದಿಸಿ ಐಷಾರಾಮಿ ಬದುಕು ಸಾಗಿಸುವ ನಟ, ನಟಿಯರ ನಡುವಿನ ವಿಭಿನ್ನ ವ್ಯಕ್ತಿತ್ವ ಅವರದು. ಅದು ನಲವತ್ತು ವರ್ಷದ ಭಾವನಾತ್ಮಕ ನಂಟು. ಅಂತಹ ನಂಟನ್ನು ಈಗ ತೊರೆಯುತ್ತಿದ್ದಾರೆ ನಟ ಅಮೀರ್ ಖಾನ್.

ಎಂಟು ವರ್ಷದ ವಯಸ್ಸಿನಿಂದಲೇ ಆಡಿ ಬೆಳೆದ ಮನೆಯಿಂದ ಬೇರೆಡೆಗೆ ಸ್ಥಳಾಂತರ ಹೊಂದುತ್ತಿದ್ದಾರೆ ಅಮೀರ್. ಆದರೆ ಈ ಅಗಲಿಕೆ 'ತಾತ್ಕಾಲಿಕ' ಎನ್ನುವುದು ಮತ್ತೊಂದು ವಿಷಯ. 40 ವರ್ಷಗಳಿಂದ ಅವರು ವಾಸವಾಗಿದ್ದ ಹಳೆಯ ಮನೆಯ ದುರಸ್ತಿ ಕಾರ್ಯ ಶುರುವಾಗಲಿದೆ. ಹೀಗಾಗಿ ಅಮೀರ್ ವಿಳಾಸ ತಾತ್ಕಾಲಿಕವಾಗಿ ಬದಲಾಗಲಿದೆ. ಹಳೆಯ ಮನೆಯ ಸಮೀಪವೇ ಬದಲಿ ಸೂರು ಹುಡುಕುತ್ತಿದ್ದಾರಂತೆ ಅಮೀರ್. ಮನೆ ನವೀಕರಣಗೊಂಡ ಬಳಿಕ ಮತ್ತೆ ಅಲ್ಲಿಗೆ ಮರಳಲಿದ್ದಾರೆ.





## ಮಲ್ಲಿಕಾ ಹೊಸ ಅವತಾರ!

ಮಲ್ಲಿಕಾ ಶೆರಾವತ್ ಹೆಸರು ಕೇಳಿದೊಡನೆ ಪಡ್ಡೆ ಹುಡುಗರ ಮೈ ರೋಮಾಂಚನಗೊಳ್ಳುತ್ತದೆ. ತುಂಡುಡುಗೆಯಲ್ಲಿ ದೇಹಸಿರಿ ಪ್ರದರ್ಶನ, ಹಸಿಬಿಸಿ ದೃಶ್ಯಗಳಿಂದಲೇ 'ಖ್ಯಾತಿ' ಪಡೆದ ಮಲ್ಲಿಕಾ ಅವಕಾಶಗಳು ಕಡಿಮೆಯಾದಂತೆ ನಟನೆಯನ್ನು ಗಂಭೀರವಾಗಿ ಪರಿಗಣಿಸಿರುವಂತಿದೆ. 'ಡರ್ಟಿ ಪಾಲಿಟಿಕ್ಸ್' ಎಂಬ ಹೊಸ ಚಿತ್ರದಲ್ಲಿ ಈಕೆಯದ್ದು ಗೌರಮ್ಮನ ಪಾತ್ರ. ಈ ಚಿತ್ರದ ಪ್ರಚಾರಕ್ಕಾಗಿ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ ಅವರೊಂದಿಗೆ ಆಯೋಜಿಸಲಾಗಿದ್ದ ರಾತ್ರಿ ಭೋಜನಕೂಟವನ್ನು ರದ್ದುಪಡಿಸಿದ್ದು ಇದಕ್ಕೆ ಸಾಕ್ಷಿ. 'ಡರ್ಟಿ ಪಾಲಿಟಿಕ್ಸ್'ನಲ್ಲಿ ಸರಳವಾಗಿ ಮೈತುಂಬಾ ಉಡುಗೆ ತೊಟ್ಟು ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿರುವುದು ಬಾಲಿವುಡ್‌ನ ಈ ವರ್ಷದ ಅಚ್ಚರಿಗಳಲ್ಲೊಂದು!

■ ಅಮಿ